4. ವರದಿಯನ್ನೊಪ್ಪಿಸುವುದು

ಶ್ರೀ ತನ್ವೀರ್ ಸೇಠ್ : ಅಧ್ಯಕ್ಷರು, ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ):– ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ಅಧ್ಯಕ್ಷನಾದ ನಾನು ಹದಿನಾಲ್ಕನೇ ವಿಧಾನ ಸಭೆಯ 2014–15 ನೇ ಸಾಲಿನ ಸಮಿತಿಯ ಮೊದಲನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಒಪ್ಪಿಸಲಾಯಿತು. ಈಗ ಶಾಸನ ರಚನೆಯ ಕಲಾಪವಿದೆ. ಈಗ ಒಂದು ಕೆಲಸ ಮಾಡೋಣ. ಈಗ ಉತ್ತರ ಕರ್ನಾಟಕದ ಅಭಿವೃದ್ಧಿ ವಿಚಾರಗಳ ಬಗ್ಗೆ ಬೇಗ ಚರ್ಚೆಯನ್ನು ಮೂರೈಸಿ ಉತ್ತರವನ್ನು ಪಡೆದುಕೊಂಡು ಬಿಡೋಣ.

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕ ಅಭಿವೃದ್ಧಿ ವಿಚಾರದಲ್ಲಿ ಅನೇಕ ಸದಸ್ಯರುಗಳು ಮಾತನಾಡುವವರಿದ್ದಾರೆ. ಆದುದರಿಂದ ಈಗ ಶೂನ್ಯ ವೇಳೆ ತೆಗೆದುಕೊಂಡು ತದನಂತರ ಉತ್ತರ ಕರ್ನಾಟಕದ ವಿಚಾರದ ಬಗ್ಗೆ ಚರ್ಚೆಯನ್ನು ತೆಗೆದುಕೊಳ್ಳಬಹುದು.

ಶ್ರೀ ಕೆ. ಶಿವಮೂರ್ತಿ : ಮಾನ್ಯ ಅಧ್ಯಕ್ಷರೆ, ಈಗ ಶೂನ್ಯ ತೆಗದುಕೊಳ್ಳಿ. ಪ್ರಸ್ತಾಪ ಮಾಡುವ ಹಲವಾರು ವಿಚಾರಗಳಿವೆ. ಈಗ ತೆಗೆದುಕೊಳ್ಳದಿದ್ದರೆ ಶೂನ್ಯ ವೇಳೆಯ ಮಹತ್ವವೇ ಹೊರಟು ಹೋಗುತ್ತದೆ. ಶೂನ್ಯ ವೇಳೆಯಲ್ಲಿ ಸಾರ್ವಜನಿಕ ಮಹತ್ವವಾದ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಲು ಅವಕಾಶ ಸಿಗುತ್ತವೆ. ಆದುದರಿಂದ ಮೊದಲು ಶೂನ್ಯ ವೇಳೆಯನ್ನು ತೆಗೆದುಕೊಂಡು ಅದನ್ನು ಮುಕ್ತಾಯ ಮಾಡಿಬಿಡಿ.

ಶ್ರೀ ವೈ.ಎಸ್.ವಿ. ದತ್ತಾ : ಮಾನ್ಯ ಸಭಾಧ್ಯಕ್ಷರೆ, ಉತ್ತರ ಕರ್ನಾಟಕದ ಬಗ್ಗೆ ತುಂಬಾ ಸುದೀರ್ಘವಾದ ಚರ್ಚೆಯಾಗಬೇಕಿದೆ. ಹೆಚ್ಚು ಸದಸ್ಯರುಗಳು ಚರ್ಚೆಯಲ್ಲಿ ಪಾಲ್ಗೊಳ್ಳಬೇಕಿದೆ. ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲಬೇಕು. ನಾವು ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದೇನೆ. ದಯವಿಟ್ಟು ಇವತ್ತೆಲ್ಲಾ ಚರ್ಚೆಗೆ ಅವಕಾಶ ಕೊಡಿ. ನಾಳೆ ಸಂಜೆ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲಿ.

ಅಧ್ಯಕ್ಷರು : ಒಂದು ನಿಮಿಷ, ನಾನು ಏನು ಹೇಳುತ್ತೇನೆಂದರೆ, ಈಗ ವಿಧೇಯಕಗಳನ್ನು ಮಂಡಿಸುವುದು ಕೆಲವು ಇದೆ.

ಶ್ರೀ ಬಿ.ಆರ್. ಪಾಟೀಲ್:– ವಿಧೇಯಕಗಳನ್ನು ಮಂಡಿಸುವುದಕ್ಕೆ ಯಾರೂ ಬೇಡವೆಂದು ಹೇಳುವುದಿಲ್ಲ. ಆದರೆ ಪರ್ಯಾಲೋಚನೆ ಪ್ರಸ್ತಾವವಾಗಬೇಕೆಂದರೆ ಸ್ವಲ್ಪ ಟೈಂ ಬೇಕಾಗುತ್ತದೆ.

ಅಧ್ಯಕ್ಷರು : ಈಗ ವಿಧೇಯಕವನ್ನು ಮಂಡಿಸೋಣ. ಆಮೇಲೆ ಕೆಲವು ವಿಧೇಯಕಗಳ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ.